# ಗರ್ವದ ಸಿಇಒ

## ಯಶಸ್ವಿನಿ ಕೆ. ಸ್ವಾಮಿ
ಉದಯದ 'ಮೈನಾ' ನರ್ತನಾ



◆ 'ಮೈನಾ'ದಲ್ಲಿ ನರ್ತನಾ ಎಷ್ಟು ಮುಖ್ಯ ಅಂತ ನಿಮಗೆ ಅನ್ನಿಸುತ್ತದೆ?

ಪಾತ್ರ ತುಂಬ ಶಕ್ತಿಶಾಲಿಯಾಗಿದೆ. ಚಿಕ್ಕ ವಯಸ್ಸಿನಲ್ಲಿಯೇ ಒಂದು ಕಂಪನಿಯ ಸಿಇಒ ಆಗಿ ನರ್ತನಾ ಕೆಲಸ ಮಾಡುತ್ತಿದ್ದಾಳೆ. ದೊಡ್ಡ ಸ್ಥಾನಕ್ಕೆ ಬಂದಿರುವ ಬಗ್ಗೆ ಅವಳಿಗೆ ಗರ್ವವೂ ಇದೆ. ತನ್ನದೇ ಆಗಬೇಕು ಎನ್ನುವ ಅಹಂಭಾವ ಇರುವ ವ್ಯಕ್ತಿತ್ವ. ಜೊತೆಗೆ ಇಷ್ಟಪಟ್ಟ ಹುಡುಗನನ್ನೇ ಕೈ ಹಿಡಿಯಬೇಕು ಎನ್ನುವ ಆಸೆಯೂ ಇದೆ. ಆಗಲೇ ಅವನಿಗೆ ಬೇರೆ ಹುಡುಗಿಯ ಜೊತೆ ಪ್ರೇಮ ಹುಟ್ಟಿರುತ್ತದೆ. ಇದರಿಂದ ಆಕೆಗೆ ಅಸೂಯೆ ಹುಟ್ಟುತ್ತದೆ. ಇಂತಹ ತಾಕಲಾಟಗಳ ನಡುವೆ ಕಥೆ ಸಾಗುತ್ತಿದೆ. ಇದರಲ್ಲೇ ಸಮಯವನ್ನು ಮಾಡಿಕೊಂಡು ಡಾನ್ಸ್ ಅಭ್ಯಾಸವನ್ನೂ ಮಾಡುತ್ತಿದ್ದೇನೆ

◆ ಅಭಿನಯವನ್ನು ನೀವು ಇಷ್ಟಪಟ್ಟಿದ್ದು ಹೇಗೆ?

ನಾನು ನಟನೆಯನ್ನು ಮಾಡುತ್ತೇನೆ ಎಂದು ಅಂದುಕೊಂಡೇ ಇರಲಿಲ್ಲ. ಅದುವೇ ಒಲಿದು ಬಂದಿದ್ದರಿಂದ ಮಾಡುತ್ತಿದ್ದೇನೆ. ಒಬ್ಬರು ನಟನೆಗೆ ಆಹ್ವಾನಿಸಿದರು. ಆಗಷ್ಟೇ ನನ್ನ 10ನೇ ತರಗತಿ ಪರೀಕ್ಷೆ ಮುಗಿದಿತ್ತು. ಅಮ್ಮನಿಗೆ ನಟಿಸಬೇಕು ಎನ್ನುವ ಆಸೆ ತಮ್ಮ ಚಿಕ್ಕ ವಯಸ್ಸಿನಲ್ಲೇ ಇತ್ತಂತೆ. ಹಾಗಾಗಿ ಅಮ್ಮ ಹೇಗೂ ರಜೆ ಇದೆ ಬಾ ಎಂದು ಕರೆದುಕೊಂಡು ಹೋದರು. 'ಅನುರೂಪ'ದಲ್ಲಿ ಅವಕಾಶ ಏನೋ ಸಿಕ್ಕಿತು. ಪಿಯು ಓದುವಾಗ ನಟನೆಯನ್ನು ಪೂರ್ಣಾವಧಿಗೆ ತೆಗೆದುಕೊಳ್ಳಲಿಲ್ಲ. ಚಿಕ್ಕಪುಟ್ಟ ಪಾತ್ರಕ್ಕೆ ಸೀಮಿತವಾದೆ. ಪಿಯುಸಿ ಮುಗಿಸಿದ ನಂತರ ನಟನೆಗೆ ಪೂರ್ಣ ಸಮಯವನ್ನು ಕೊಡುತ್ತಿದ್ದೇನೆ. ಪದವಿಯಲ್ಲಿ ಓದುತ್ತಲೇ ನಟನೆಯನ್ನು ಮುಂದುವರಿಸಿದೆ. ಓದಿನಲ್ಲಿ ತುಂಬ ಆಸಕ್ತಿ ಇತ್ತು.

◆ ನಿಮ್ಮ ಮುಂದಿನ ಯೋಚನೆ ಏನು?

ಸದ್ಯ ಅದನ್ನು ಯೋಚಿಸುವ ಸ್ಥಿತಿಯಲ್ಲಿ ಇಲ್ಲ. ತುಂಬ ಬಿಜಿ ಇರುವುದರಿಂದ ಇದೇ ಕೆಲಸ ಮಾಡುತ್ತಿದ್ದೇನೆ. ಝೀ ಕನ್ನಡದಲ್ಲಿ 'ಲಕ್ಷ್ಮೀ ನಿವಾಸ'ದಲ್ಲಿಯೂ ನಟಿಸುತ್ತಿದ್ದೇನೆ. ತೆಲುಗಿನಲ್ಲಿ ಒಂದು ಪಾತ್ರ ಮಾಡುತ್ತಿದ್ದೇನೆ. ನನ್ನ ಬಾಲ್ಯದಿಂದಲೂ ಡಾನ್ಸ್ ರಿಯಾಲಿಟಿ ಶೋ ಮಾಡಬೇಕು ಎನ್ನುವ ಆಸೆ ಇತ್ತು. ಅದಕ್ಕೆ ಈಗ ವೇದಿಕೆಯೂ ಸಿಕ್ಕಿದ್ದು 'ಡಾನ್ಸ್ ಕರ್ನಾಟಕ ಡಾನ್ಸ್'ನಲ್ಲಿ ಮಾಡುತ್ತಿದ್ದೇನೆ. ಕೆಲಸದಲ್ಲೇ ಮುಳುಗಿರುವುದರಿಂದ ಬೇರೆ ಯೋಚನೆ ಇಲ್ಲ.

ಅವಕಾಶಗಳು ಸಿಕ್ಕಾಗ ಬಿಡಬಾರದು. ಎಷ್ಟೊಂದು ಕಲಾವಿದರಿಗೆ ಅವಕಾಶ ಸಿಗುತ್ತಿಲ್ಲ. ಹಾಗಾಗಿ ಕಷ್ಟಪಟ್ಟು ಮಾಡಲೇಬೇಕು. ಈಗ ದಿನದಲ್ಲಿ ನಾಲ್ಕೈದು ಗಂಟೆ ಅಷ್ಟೇ ನಾನು ನಿದ್ದೆ ಮಾಡುವುದು. ವಿಶ್ರಾಂತಿಗೂ ಅವಕಾಶ ಇಲ್ಲ. ರಜೆ ಬೇಕು ಎಂದು ಅನ್ನಿಸಿಯೇ ಇಲ್ಲ. ಕೆಲಸವನ್ನೇ ಎಂಜಾಯ್ ಮಾಡುತ್ತಿದ್ದೇನೆ.

◆ ನೀವು ಯಾವ ಡಾನ್ಸ್ ಮಾಡ್ತೀರಿ?

ಶಾಲಾ ದಿನಗಳಲ್ಲಿ ಮಾಡುತ್ತಿದ್ದೆ. ನಂತರ ಇದಕ್ಕಾಗಿ ವಿಶೇಷ ತರಬೇತಿ ಆಗಲಿ ಅಭ್ಯಾಸವಾಗಲಿ ಮಾಡಲಿಲ್ಲ. ನಾನ್ ಡಾನ್ಸರ್ ಆಗಿಯೇ ಈ ಸ್ಪರ್ಧೆಯಲ್ಲಿ ಅವಕಾಶ ಸಿಕ್ಕಿದೆ. ಡಾನ್ಸ್ ಕಲಿಯಬೇಕು ಎನ್ನುವ ಆಸೆ ಇದೆ. ಇಷ್ಟರ ನಡುವೆ 'ತರಂಗಾಂತರಂಗ' ಸಿನಿಮಾ ಮಾಡಿದ್ದೇನೆ. ಬಿಡುಗಡೆ ಆಗಬೇಕಿದೆ.

◆ ಅವಕಾಶ ಬಯಸುವ ಹೊಸಬರಿಗೆ ನಿಮ್ಮ ಮಾರ್ಗದರ್ಶನ ಏನು?

ನಾನು ವೃತ್ತಿಯನ್ನು ಆರಂಭಿಸಿ ಎಂಟು ವರ್ಷಗಳಾಯಿತು. ಆಡಿಷನ್ ಮತ್ತು ಲುಕ್ ಟೆಸ್ಟ್ ತೆಗೆದುಕೊಂಡು ಪಾತ್ರಕ್ಕೆ ಸೂಕ್ತ ಅಗ್ನೀನಾ ಎಂದು ನೋಡಿ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆಗ ನಟನೆಯ ಜೊತೆಗೆ ಬೇರೆ ಕಲೆ – ಆಟೋಟ ಮಾಡುತ್ತೇವಾ ಎನ್ನುವುದನ್ನು ನೋಡುತ್ತಿದ್ದರು. ಈಗ ಅಷ್ಟು ಸೂಕ್ಷ್ಮ ಮಾನದಂಡಗಳನ್ನು ಅನುಸರಿಸುತ್ತಿಲ್ಲ. ಆದರೂ ಆಸಕ್ತರಿಗೆ ಹೇಳುವುದೇನೆಂದರೆ, ಸ್ಕ್ರೀನ್ ಫೇಮ್ ಆಸೆಗೆ ಬರಬಾರದು. ನಿಜಕ್ಕೂ ಆಸಕ್ತಿ ಇದೆಯೇ ಎನ್ನುವುದನ್ನು ನೋಡಬೇಕು. ಆ್ಯಕ್ಟಿಂಗ್ ಕ್ಲಾಸ್‌ಗೆ ಹೋದರೆ ನಟನೆ ಕಲಿಯಬಹುದಾ ಎಂದು ಕೆಲವರು ಕೇಳುತ್ತಾರೆ. ನಾನು ಯಾವ ತರಬೇತಿಯನ್ನು ತೆಗೆದುಕೊಳ್ಳಲಿಲ್ಲ. ನಮಗೆ ನಟನೆಯ ಮೇಲೆ ಆಸಕ್ತಿ ಇರಬೇಕು. ಟೀವಿಯಲ್ಲಿ ಕಾಣಿಸಿಕೊಳ್ಳಬೇಕು ಎನ್ನುವವರಿಗೆ ನಾನು ಏನೂ ಹೇಳುವುದಿಲ್ಲ. ಯಾರೇ ಆದರೂ ಆಡಿಷನ್ ಮೂಲಕವೇ ಬರಬೇಕು ಎಂದು ಸಲಹೆ ನೀಡುತ್ತೇನೆ. ಯಾರನ್ನೋ ಪರಿಚಯಿಸಿ ಅವಕಾಶ ಕೊಡಿಸುವುದರಿಂದ ಯಾವ ಪ್ರಯೋಜನವೂ ಆಗಲಾರದು ಎನ್ನುವುದು ನನ್ನ ಭಾವನೆ. ಎಷ್ಟೋ ನಟರು ನೂರು ಆಡಿಷನ್ ನೀಡಿದ ಮೇಲೆ ಆಯ್ಕೆ ಆಗಿದ್ದಾರೆ. ಯಾವುದೇ ಅವಕಾಶದ ಮಹತ್ವ ಅರ್ಥ ಆಗಬೇಕು ಅಂದರೆ, ಯಾವುದೂ ಸುಲಭಕ್ಕೆ ಸಿಗಬಾರದು.

◆ ಸಾಮಾಜಿಕ ಮಾಧ್ಯಮಗಳನ್ನು ನೀವು ಹೇಗೆ ಬಳಸಿಕೊಳ್ಳುತ್ತೀರಿ?

ಸಾಮಾಜಿಕ ಮಾಧ್ಯಮಗಳಲ್ಲಿ ನಮ್ಮ ಜಾಹೀರಾತು ಮಾಡಬೇಕು. ನಾನು ಸಾಧ್ಯ ಆದಷ್ಟು ಅದನ್ನು ಬಳಸಲು ಪ್ರಯತ್ನಿಸುತ್ತೇನೆ. ನಾನು 'ಮೈನಾ'ದಲ್ಲಿ ಮಾಡುತ್ತಿದ್ದೇನೆ ನೋಡಿ, ಪ್ರೋತ್ಸಾಹಿಸಿ ಎಂದು ಪೋಸ್ಟ್ ಹಾಕುತ್ತೇನೆ. ಡಿಕೆಡಿ ಶೋಗೂ ಬೆಂಬಲಿಸಿ ಎಂದು ಕೇಳುತ್ತೇನೆ. ಎಷ್ಟೋ ಅವಕಾಶಗಳು ಸಾಮಾಜಿಕ ಮಾಧ್ಯಮಗಳ ಮೂಲಕವೇ ಸಿಗುವುದುಂಟು. ಅದೂ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ ಎನ್ನುವುದು ಗೊತ್ತು. ಹಾಗಾಗಿ ಎಷ್ಟು ಬೇಕೋ ಅಷ್ಟಕ್ಕೆ ಬಳಸುತ್ತೇನೆ. ಆ ಮಾಧ್ಯಮದ ಪ್ರತಿಕ್ರಿಯೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅವುಗಳನ್ನು ನೋಡಲೂ ಆಗುವುದಿಲ್ಲ. ಏಕೆಂದರೆ, ನನಗೆ ನೆಗೆಟಿವ್ ಕಾಮೆಂಟ್ ತೆಗೆದುಕೊಳ್ಳಲು ಇಷ್ಟ ಇಲ್ಲ. ಹಾಗಾಗಿ ಪಾಸಿಟಿವ್ ಕೂಡ ನೋಡಲು ಹೋಗುವುದಿಲ್ಲ. ಒಟ್ಟಾರೆ ಕಾಮೆಂಟ್ ಉಸಾಬರಿಗೆ ಹೋಗುವುದಿಲ್ಲ.

■ ರಾಘವೇಂದ್ರ ಕೆ.